# ಮಗನ 'ಪರಸಂಗ'

'ನನ್ನ ಮಗ ಒಳ್ಳೆಯ ನಟ ಅಂತ ಎಂದೂ ನನಗೆ ಅನಿಸಿಲ್ಲ. ಅದೇ ನನ್ನ ಮಗಳಿಗೆ ಎಷ್ಟೋ ಸಲ ಶಹಬ್ಬಾಸ್ ಹೇಳಿದ್ದೀನಿ. ಅವಳು ಸೊಗಸಾಗಿ ಅಭಿನಯಿಸಬಲ್ಲಳು'—ಹಾಗೆಂದು 'ಪರಸಂಗದ ಗೆಂಡೆತಿಮ್ಮ'ನಾಗಿ ಮೆರೆದ ಹಿರಿಯ ನಟ ಕಟುವಿಮರ್ಶೆ ಮಾಡಿದಾಗ ಎದುರಲ್ಲಿ ಅವರ ಪತ್ನಿ ಇದ್ದರು. ಮಾತಿನ ಕೊಸರು ಎಂಬಂತೆ, 'ಇವಳಿಗೂ ಅಭಿನಯ ಕಲಿತುಕೋ ಎಂದು ಹೇಳುತ್ತಲೇ ಇರುತ್ತೀನಿ' ಎಂದರು. ಅದಕ್ಕೆ ಪ್ರತಿಕ್ರಿಯಿಸಿದ ಅವರ ಪತ್ನಿ ಸುಮ್ಮನೆ ನಕ್ಕರು.

ನಟನ ವಿಮರ್ಶೆ, ಅದಕ್ಕೆ ಅವರ ಪತ್ನಿಯ ಪ್ರತಿಕ್ರಿಯೆ ಮರೆಯಲು ಸಾಧ್ಯವೇ ಇಲ್ಲ. ಸುದ್ದಿಮಿತ್ರರ ಎದುರು ಹೀಗೆ ಮಾತನಾಡಲು ಹಾಗೂ ಪ್ರತಿಕ್ರಿಯಿಸಲು ದೊಡ್ಡತನ ಬೇಕು. ಅದು ಆ ದಂಪತಿಗೆ ಇತ್ತು.

ಆ ನಟ ಟೀಕಿಸಿದ ಅದೇ ಮಗ ಒಂದು ದೊಡ್ಡ ಹೂಗುಚ್ಛ ಹಿಡಿದು ಪವರ್ ಸ್ಟಾರ್ ಸಿನಿಮಾ ಮುಹೂರ್ತಕ್ಕೆ ಶುಭಾಶಯ ಕೋರುವವರ ಸಾಲಿನಲ್ಲಿ ಮುಂದೆ ನಿಂತಿದ್ದರು. ನಟನಿಂದ ಬಿಸಿಯಪ್ಪುಗೆ ಸಿಕ್ಕಿತು. ತನ್ನ ಅಪ್ಪ ಹೇಗೆಲ್ಲಾ ಟೀಕಿಸುತ್ತಿದ್ದರು ಎಂದು ನೀಳಕಾಯದ ಮಗ ನಿಮಿಷಗಟ್ಟಲೆ ಪವರ್ ಸ್ಟಾರ್ ಜೊತೆ ಮಾತು ಹಂಚಿಕೊಂಡರು.

ಇನ್ನೊಮ್ಮೆ ಸಮಾರಂಭವೊಂದರಲ್ಲಿ ಹಿರಿಯ ನಟ ಮೆಚ್ಚಿ ಮಾತನಾಡಿದ್ದ ಅವರ ಮಗಳು ಸಿಕ್ಕರು. ಅವರು ಕೂಡ ನೆನೆದದ್ದು ಅದೇ ಅಪ್ಪನನ್ನು. ಹೆಚ್ಚು ಇಂಗ್ಲಿಷ್ ಬೆರೆತ ಕನ್ನಡದಲ್ಲಿ ಮಾತನಾಡುತ್ತಿದ್ದ ಆ ಮಗಳು ಒಂದು ಕಾಲನ್ನು ಚೆನ್ನೈನಲ್ಲಿ, ಇನ್ನೊಂದು ಕಾಲನ್ನು ನಗರದಲ್ಲಿ ಇಟ್ಟುಕೊಂಡವರು. 'ನಾನು ಅಪ್ಪ ಹೇಳಿದಷ್ಟು ಆ್ಯಕ್ಟಿಂಗನ್ನು ಸೀರಿಯಸ್ ಆಗಿ ತೆಗೆದುಕೊಂಡಿದ್ದಿದ್ದರೆ ಈಗ ಎಲ್ಲೋ ಇರುತ್ತಿದ್ದೆ' ಎನ್ನುವಾಗ ಅವರ ಕಣ್ಣಲ್ಲಿ ಹನಿಗಳು ಜಮೆಯಾಗಿದ್ದವು.

ವರ್ಷಗಳ ಹಿಂದೆ ಅಪ್ಪ ಟೀಕಿಸಿದ ಅದೇ ಮಗ ಈಗ ರಿಯಾಲಿಟಿ ಷೋ ನಡೆಸುತ್ತಾರೆ. ಅದರ ಮೂಲಕ ಜನಪ್ರಿಯರೂ ಹೌದು.

ಆ ರಿಯಾಲಿಟಿ ಷೋನಲ್ಲಿ ಪದೇಪದೇ ಸೊಂಟದ ಕೆಳಗಿನ ಮಾತು ಕೇಳಿಬರುತ್ತಿತ್ತು. 'ಪರಸಂಗ'ದ ನಟನ ಜೊತೆ ಆಪ್ತವಾಗಿ ಮಾತನಾಡುವಷ್ಟು ಸಲಿಗೆ ಇದ್ದ ಹಿರಿಯರೊಬ್ಬರು 'ಎಂಥ ಅಪ್ಪನಿಗೆ ಎಂಥ ಮಗ' ಎಂಬ ಒಂದೇ ಏಟಿನ ವಿಮರ್ಶೆ. ಮಾಡಿದರು.

ಮತ್ತೊಂದು ಕಾರ್ಯಕ್ರಮದಲ್ಲಿ ಕನಸುಗಾರ ನಟ ಒಂದು ಲಹರಿಯಲ್ಲಿ ಮಾತನಾಡುತ್ತಿದ್ದರು. ಎದುರಲ್ಲಿ 'ಪರಸಂಗ'ದ ನಟನ ಮಗ ಹಾದುಹೋದದ್ದೇ, 'ಎಂತೆಂಥ ಜೋಕ್‌ಗಳನ್ನು ಮಾಡಿ ಜನರನ್ನು ಬುಟ್ಟಿಗೆ ಹಾಕಿಕೊಂಡು ಬಿಟ್ಟೆಯಪ್ಪಾ' ಎನ್ನುತ್ತಾ ಅವರು ಗೊಳ್ಳನೆ ನಕ್ಕಾಗ, ಆ ಯುವನಟ ನಗಲಿಲ್ಲ.

ಒಂದು ರಿಯಾಲಿಟಿ ಷೋ ಸ್ಪರ್ಧಿಯಾಗಿ ಹೈರಾಣಾಗಿ ಬಂದಮೇಲೆ ಅವರು 'ಕಾಮಿಡಿ ವಿತ್ ಕಪಿಲ್' ಶೈಲಿಯಿಂದ ಪ್ರೇರಿತರಾಗಿ ಕನ್ನಡದ ತಮಾಷೆ ರಿಯಾಲಿಟಿ ಷೋ ನಡೆಸುತ್ತಿದ್ದಾರೆ. ಒಂದು ವೇಳೆ ಈಗ ಅವರ ತಂದೆ ಬದುಕಿದ್ದಿದ್ದರೆ ಅದಕ್ಕೆ ಏನು ವಿಮರ್ಶೆ ಮಾಡುತ್ತಿದ್ದರು ಎನ್ನುವ ಕುತೂಹಲ ಹಳೆಯ ತಲೆಮಾರಿನ ಅನೇಕರಿಗೆ ಇದೆ. ಈ ಯುವನಟನಿಗೆ ಅಪ್ಪ ಅದನ್ನು ನೋಡದೇ ಇರುವುದೇ ವಾಸಿಯೇನೋ ಎನಿಸಿದರೂ ಅಚ್ಚರಿಯಿಲ್ಲ.

● **ವಿಶಾಖ ಎನ್.**

Printed and Published by S.V. Srinivasan on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: **K.N. SHANTH KUMAR.**

Editorial Office: 75, M.G Road, Bengaluru-560 001 E-mail:editormy@mayura.co.in. Phone: 2588 0000,
Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68